## ದಿನಾಂಕ: 21.05.2022 ರಂದು ಶ್ರೀರಂಗಪಟ್ಟಣ ಉಪ-ವಿಭಾಗ ಕಚೇರಿ ಆವರಣದಲ್ಲಿ ನಡೆದ ಜನಸಂಪರ್ಕ ಸಭೆಯ ನಡಾವಳಿಗಳು

**ಹಾಜರಿದ್ದ ಅಧಿಕಾರಿ/ನೌಕರರು:**

1) ಶ್ರೀ ರಘು.ಕೆ.ಎಸ್ : ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಪಾಂಡವಪುರ
2) ಶ್ರೀ ಮಂಜುನಾಥ್ ಪ್ರಸಾದ್ ಎಂ : ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಶ್ರೀರಂಗಪಟ್ಟಣ
3) ಶ್ರೀ ಪ್ರದೀಪ್ : ಸಹಾಯಕ ಇಂಜಿನಿಯರ್(ವಿ), ಶ್ರೀರಂಗಪಟ್ಟಣ
4) ಶ್ರೀಮತಿ ಜ್ಯೋತಿ ಎಲ್. : ಸಹಾಯಕ ಇಂಜಿನಿಯರ್(ತಾಂ), ಶ್ರೀರಂಗಪಟ್ಟಣ
5) ಶ್ರೀ ಸಂಪತ್ ಕುಮಾರ್ : ಸಹಾಯಕ ಇಂಜಿನಿಯರ್(ವಿ), ಬೆಳಗೊಳ ಶಾಖೆ
6) ಶ್ರೀ ಮಂಜುನಾಥ : ಸಹಾಯಕ ಇಂಜಿನಿಯರ್(ವಿ), ಅರಕೆರೆ ಶಾಖೆ
7) ಶ್ರೀ ನವೀನ್‌ಕುಮಾರ್ : ಕಿರಿಯ ಇಂಜಿನಿಯರ್(ವಿ), ನಗುವನಹಳ್ಳಿ ಶಾಖೆ
8) ಶ್ರೀ ಸುರೇಂದ್ರ ಮೋಹನ್ : ಕಿರಿಯ ಇಂಜಿನಿಯರ್(ವಿ), ಕೆ.ಶೆಟ್ಟಹಳ್ಳಿ ಶಾಖೆ
9) ಶ್ರೀ ಕೆ.ಆರ್. ರಾಜು : ಕಿರಿಯ ಇಂಜಿನಿಯರ್(ವಿ), ಕೊಡಿಯಾಲ ಶಾಖೆ

ಜನಸಂಪರ್ಕ ಸಭೆಯ ಅಧ್ಯಕ್ಷರು ಬೆಳಗ್ಗೆ 03.00 ರಲ್ಲಿ ಸಭೆಯನ್ನು ಪ್ರಾರಂಭಿಸಿ, ಸ್ವಾಗತ ಭಾಷಣವನ್ನು ಮಾಡುವ ಮೂಲಕ ಸಭೆಗೆ ಹಾಜರಾಗಿದ್ದ ಅಧಿಕಾರಿ/ನೌಕರ ವರ್ಗದವರಿಗೆ, ಹಾಗೂ ಗ್ರಾಹಕರಿಗೆ ಸ್ವಾಗತ ಕೋರುತ್ತಾ, ಶ್ರೀರಂಗಪಟ್ಟಣ ತಾಲ್ಲೋಕು ವ್ಯಾಪ್ತಿಯಲ್ಲಿ ವಿದ್ಯುಚ್ಛಕ್ತಿಗೆ ಸಂಬಂಧಿಸಿದ ದೂರು ಮತ್ತು ಸಲಹೆಗಳನ್ನು ಮುಕ್ತವಾಗಿ ಚರ್ಚಿಸಲು ಕೋರಿದರು. ನಂತರ ಸಭೆಯಲ್ಲಿ ನೊಂದಾಯಿಸಲ್ಪಟ್ಟ ದೂರು ಮತ್ತು ದೂರಿಗೆ ಸಂಬಂಧಿಸಿದಂತೆ ತೆಗೆದುಕೊಳ್ಳಬೇಕಾದ ಕ್ರಮಗಳ ಬಗ್ಗೆ ಚರ್ಚಿಸಲಾಯಿತು.

| | ದೂರು | ಕ್ರಮ |
|---|---|---|
| 1) | **ಲಕ್ಷ್ಮೀನಾರಾಯಣ, ಶ್ರೀನಿವಾಸ ಅಗ್ರಹಾರ** | |
| | ಕಬ್ಬಿನ ಗದ್ದೆಗೆ ಎಲ್.ಟಿ ಲೈನ್ ತಗಲುತ್ತಿರುವುದರಿಂದ ಬದಲಿ ವ್ಯವಸ್ಥೆ ಮಾಡಲು ಕೋರಿರುತ್ತಾರೆ. | ಮಾನ್ಯ ಕಾ.ಇಂ(ವಿ), ಕಛೇರಿ ಪಾಂಡವಪುರ ವಿಭಾಗ ರವರು ಸ್ಥಳ ಪರಿಶೀಲಿಸಿ ಸಾಧ್ಯವಾದ ಕಡೆ ಎಲ್.ಟಿ ಮಾರ್ಗ ಬದಲಾಯಿಸಿ ವರದಿ ನೀಡಲು ಶಾಖಾಧಿಕಾರಿಯವರಿಗೆ ಆದೇಶಿಸಿದರು. |
| 2) | **ಲಕ್ಷ್ಮೀನಾರಾಯಣ, ಶ್ರೀನಿವಾಸ ಅಗ್ರಹಾರ** | |
| | F3 ಲೋಕಪಾವನಿ ಫೀಡರ್ ಮೇಲೆ ನಿರಂತರ ಲೈನ್ ಟ್ರಬಲ್ ಇಂದ ಗ್ರಾಹಕರಿಗೆ ತೊಂದರೆ ಆಗುತ್ತಿರುವುದಾಗಿ ದೂರಿರುತ್ತಾರೆ. | ಮಾನ್ಯ ಕಾ.ಇಂ(ವಿ), ಕಛೇರಿ ಪಾಂಡವಪುರ ವಿಭಾಗ ರವರು ಶಾಖಾಧಿಕಾರಿ ರವರಿಗೆ ವಿಚಾರಿಸಿದಾಗ, ಶಾಖಾಧಿಕಾರಿ ರವರು ಸದರಿ ಮಾರ್ಗದಲ್ಲಿರುವ ಕೃಷಿ ಸ್ಥಾವರಗಳಿಗೆ ಪ್ರತ್ಯೇಕ ಫೀಡರ್ ಮಾಡಲು ಮಂಜೂರಾಗಿದ್ದು, ಗುತ್ತಿಗೆದಾರರಾದ ಮೆ.ರೂಪ ಇಂಜಿನಿಯರಿಂಗ್ ರವರು ಕಾಮಗಾರಿಯನ್ನು ವಿಳಂಬ ಮಾಡುತ್ತಿದ್ದು, ಗುತ್ತಿಗೆದಾರರೊಂದಿಗೆ ಚರ್ಚೆ ನಡೆಸಿ ಕಾಮಗಾರಿಯನ್ನು ಕೈಗೆತ್ತುಕೊಂಡು ತುರ್ತಾಗಿ ಪೂರ್ಣಗೊಳಿಸುವಂತೆ ಸೂಚಿಸಿ ಇಲ್ಲವಾದಲ್ಲಿ ಗುತ್ತಿಗೆದಾರರಿಗೆ ನೋಟೀಸ್ ನೀಡಿ ಶಿಸ್ತು ಕ್ರಮ ತೆಗೆದುಕೊಳ್ಳಲು ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ರವರಿಗೆ ಮಾನ್ಯ ಕಾರ್ಯನಿರ್ವಾಹಕ ಇಂಜಿನಿಯರ್ ರವರು ನಿರ್ದೇಶಿಸಿರುತ್ತಾರೆ. |
| 3) | **ಸ್ವಾಮಿ,ಚನ್ನನಕೆರೆ** | |
| | 25ಕೆವಿಎ Transformer Structure ಮಳೆ ಗಾಳಿಯಿಂದ ಮುರಿದಿರುತ್ತದೆ ಎಂದು ದೂರು ನೀಡಿರುತ್ತಾರೆ. | ಮಾನ್ಯ ಕಾ.ಇಂ(ವಿ), ಕಛೇರಿ ಪಾಂಡವಪುರ ವಿಭಾಗ ರವರು ಶಾಖಾಧಿಕಾರಿ ರವರಿಗೆ ಸ್ಥಳ ಪರಿಶೀಲಿಸಿ ತುರ್ತಾಗೆ ಆದ್ಯತೆ ಮೇರೆಗೆ 25ಕೆವಿಎ Transformer Structure ಬದಲಿಸಿ ವರದಿ ನೀಡಲು ಆದೇಶಿಸಿದರು. |
| | | |

ಸಭೆಯನ್ನು 5:30ಕ್ಕೆ ಮುಕ್ತಾಯಗೊಳಿಸುತ್ತಾ, ಮೇಲ್ಕಂಡ ದೂರುಗಳಿಗೆ ತೆಗೆದುಕೊಂಡ ಕ್ರಮಗಳ ಬಗ್ಗೆ ಅನುಪಾಲನಾ ವರದಿಯನ್ನು ಮುಂದಿನ ಜನಸಂಪರ್ಕ ಸಭೆಯಲ್ಲಿ ಹಾಜರುಪಡಿಸುವಂತೆ ಉಪ-ವಿಭಾಗಾಧಿಕಾರಿಯವರಿಗೆ ಸೂಚಿಸಲಾಯಿತು.

ಮೆಮೊ ಸಂಖ್ಯೆ: ಸಕಾನಿಇಂ(ವಿ)/ಸಇಂ(ತಾಂ)/ಶ್ರೀರಂಪ/2022-23/ ದಿನಾಂಕ:

**ಪ್ರತಿಗಳನ್ನು ಇವರ ಅವಗಾಹನೆಗಾಗಿ ಸಲ್ಲಿಸಲಾಗಿದೆ.**

1) ಮುಖ್ಯ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನೆ ವಲಯ, ಚಾವಿಸನಿನಿ, ಮೈಸೂರು.
2) ಪ್ರಧಾನ ವ್ಯವಸ್ಥಾಪಕರು(ತಾಂ), ನಿಗಮ ಕಾರ್ಯಾಲಯ, ಚಾವಿಸನಿನಿ, ಮೈಸೂರು.
3) ಅಧೀಕ್ಷಕ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನೆ ವೃತ್ತ, ನಿಗಮ ಕಾರ್ಯಾಲಯ, ಚಾವಿಸನಿನಿ, ಮಂಡ್ಯ.
4) ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನೆ ವಿಭಾಗ, ಚಾವಿಸನಿನಿ, ಪಾಂಡವಪುರ.
5) ಕಛೇರಿ ಪ್ರತಿ.

(ಮಂಜುನಾಥ್ ಪ್ರಸಾದ್.ಎಂ)
ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ)
ಕಾರ್ಯ ಮತ್ತು ಪಾಲನೆ ಉಪ-ವಿಭಾಗ,
ಚಾವಿಸನಿನಿ, ಶ್ರೀರಂಗಪಟ್ಟಣ.

Scanned By Scanner Go